ಶ್ರೀ ಬಿ.ವಿ. ಕಕ್ಕಿಲಾಯ.—ಅವರ ಮೇಲೆ ಪರಿಣಾಮ ಆಗುವುದು ಬೇಡ; ನಮ್ಮ ಜನರ ಮೇಲೆ ಆದರೆ ಸಾಕು. ಈ ಸದನ ನಮ್ಮ ಕರ್ನಾಟಕದ ೩ ಕೋಟಿ ಜನರ ಪ್ರತಿನಿಧಿ. ಈ ಸದನದ ಒಂದು ನಿರ್ಣಯ ಅಂದರೆ ಅವರ ಮಾತುಗಳನ್ನು ಪ್ರತಿಬಿಂಬಿಸಬೇಕು, ಅದು ನಮ್ಮ ಧರ್ಮ. ಆದಕ್ಕೋಸ್ಕರ ಹೇಳುತ್ತಿದ್ದೇನೆ, ಅವರ ಮೇಲೆ ಪರಿಣಾಮವಾಗಲಿ, ಆಗದಿರಲಿ ಆ ಬಗ್ಗೆ ನನಗೆ ಕಾಳಜಿ ಇಲ್ಲ. ಪರಿಣಾಮವಾದರೆ ಒಳ್ಳೆಯದು. ೧೦ ವರ್ಷಗಳ ಕಾಲ ಮೀಸಲಾತಿ ಎಂದು ಸಂವಿಧಾನದಲ್ಲಿ ಬರೆದಿದ್ದರೆ, ತಮ್ಮಂಥವರು ಮನಸ್ಸು ಮಾಡಿದಾಗ ಕೇವಲ ಐದೇ ವರ್ಷಗಳಲ್ಲಿ ಜಾತ್ಯಾತೀತ, ಸಮಾಜವಾದಿ, ಪ್ರಜಾಪ್ರಭುತ್ವ ಸಾರ್ವಭೌಮ ರಾಷ್ಟ್ರವನ್ನು ಕಟ್ಟಲಿಕ್ಕೆ ಸಾಧ್ಯವಾಗುತ್ತದೆ. ಒಂದು ವೇಳೆ ತಮ್ಮಂಥವರು ದೂರ ಉಳಿದರೆ; ನಾವಂತೂ ಹಾಗಿರದೆ ಹೋರಾಡುತ್ತೇವೆ. ೧೦-೨೦-೩೦ ವರ್ಷಗಳು ಬೇಕಾಗಬಹುದು, ಆದರೂ ನಾವು ಉದ್ದೇಶ ಸಾಧಿಸುವುದು ಮಾತ್ರ ನಿಜ. ಇಷ್ಟು ಮಾತ್ರ ಹೇಳಿ, ಈ ನಿರ್ಣಯಕ್ಕೆ ಸದನವು ಸರ್ವಾನುಮತದಿಂದ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಕಕ್ಕಿಲಾಯ ಅವರು ಜಾತ್ಯಾತೀತ ಸಮಾಜದ ಬಗ್ಗೆ ಹೇಳಿದರು. ಜಾತಿ ಆಧಾರದ ಮೇಲೆ ಮೀಸಲಾತಿಯನ್ನು ನಮ್ಮ ರಾಷ್ಟ್ರದಲ್ಲಿ ಇಟ್ಟಿದ್ದಾರೆ. ಆದರೆ...

SRI C.M. ARUMUGHAM.—The Chair has not called him to speak and if he wants to participate in the debate, let him participate tomorrow.

Announcement

MR SPEAKER.—I have received a letter from the Karnataka Legislature Congress (I) Party stating that the following Members are admitted to their party:

Sriyuths.—

1 P.F. Rodrigues,
2 B.H. Lakshmaniah,
3 K.H. Ranganath,
4 Patel Papa Naik,
5 K.H. Siddaramappa
& 6 V. Masiyappa.

Now the House stands adjourned to meet tomorrow at 1 P.M.

The House adjourned at Six of the Clock to meet on Thursday, the 20th February 1980 at One of the Clock.